ಸಹಕಾರಿ ಸಂಘಗಳಲ್ಲಿನ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸುವುದು

671 - ಶ್ರೀ ಎಲ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಸಹಕಾರಿ ಸಂಘಗಳಲ್ಲಿರುವ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸುವ ವಿಚಾರ ಯಾವ ಹಂತದಲ್ಲಿದೆ?*

ಆ) *ಗ್ರಾಮಸೇವಾ ಸಹಕಾರಿ ಸಂಘಗಳ ನೌಕರರು ಈ ಹಿಂದೆ ಉಪವಾಸ ಸತ್ಯಾಗ್ರಹದಲ್ಲಿದ್ದಾಗ ಸರ್ಕಾರದವರು ಭರವಸೆಗಳನ್ನೇನಾದರೂ ನೀಡಿದ್ದರೇ?*

ಇ) *ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಕೊಂಡಿರುವ ತೀರ್ಮಾನಗಳೇನು?*

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು):

ಅ) ಸಹಕಾರಿ ಸಂಘಗಳ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸುವ ವಿಚಾರ ಸರ್ಕಾರದ ಆಲೋಚನೆಯಲ್ಲಿಲ್ಲ.

ಆ) ಇಲ್ಲ.

ಇ) ಭರವಸೆ ಇಲ್ಲದಿದ್ದಾಗ್ಯೂ ಸರ್ಕಾರ ಸಹಕಾರ ಸಂಘಗಳ ನಿಬಂಧಕರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಸಮಿತಿ ರಚಿಸಿದ್ದು ನೌಕರರ ಸೇವಾ ಸಮಸ್ಯೆಗಳ ಪರಿಹಾರಗಳ ಬಗ್ಗೆ ವರದಿ ಮಾಡಲು ವ್ಯವಸ್ಥೆ ಮಾಡಲಾಗಿದೆ. ಪೂರ್ಣ (ಅಂತಿಮ) ವರದಿ ಕಾಯಲಾಗಿದೆ.

ಗಂಧದ ಮರ ಹಾಗೂ ಆನೆ ದಂತಗಳ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟುವುದು

672 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. *ಕರ್ನಾಟಕದಲ್ಲಿ ಗಂಧದ ಮರ ಹಾಗೂ ಆನೆ ದಂತಗಳ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು?*
2. *ಕಳ್ಳ ಸಾಗಾಣಿಕೆದಾರರನ್ನು ಈವರೆವಿಗೂ ಬಂಧಿಸದಿರಲು ಕಾರಣವೇನು? ಹಾಗೂ ಬಂಧಿಸಲು ಕೈಗೊಂಡಿರುವ ಕ್ರಮಗಳೇನು?*
3. *ಕಳ್ಳ ಸಾಗಾಣಿಕೆದಾರ ಶ್ರೀ ವೀರಪ್ಪನ್ ಬಂಧನ ಮಾಡಲು ಸರ್ಕಾರದದವರು ಕೈಗೊಂಡ ಕ್ರಮಗಳೇನು?*
4. *ವೀರಪ್ಪನ್ ಹಿಡಿಯುವುದಕ್ಕಾಗಿ ಇದುವರೆಗೆ ಮಾಡಿರುವ ವೆಚ್ಚವೆಷ್ಟು?*

ಶ್ರೀ ಇ.ಟಿ. ಶಂಭುನಾಥ್ (ರಾಜ್ಯ ಅರಣ್ಯ ಸಚಿವರು):

1. ರಾಜ್ಯದಲ್ಲಿ ಗಂಧದ ಮರ ಆನೆ ದಂತ ಮತ್ತು ಇತರೆ ಅರಣ್ಯ ಉತ್ಪನ್ನಗಳ ಕಳ್ಳ ಸಾಗಾಣಿಕೆಯನ್ನು ತಪ್ಪಿಸಲು 22 ಅರಣ್ಯ ಸಂಚಾರಿ ದಳಗಳನ್ನು ನೇಮಿಸಿ ಅವುಗಳಿಗೆ ವೈರ್‌ಲೆಸ್ ಉಪಕರಣಗಳನ್ನು ಅಳವಡಿಸಿದ ವಾಹನಗಳನ್ನು ಒದಗಿಸಲಾಗಿದೆ. ಕೆಲವೊಮ್ಮೆ ಕಳ್ಳಸಾಗಾಣಿಕೆದಾರರು ನಡೆಸುವ ಹಲ್ಲೆಯಿಂದ ರಕ್ಷಣೆ ಪಡೆಯಲು ಬಂದೂಕನ್ನು ಸಹ ಒದಗಿಸಲಾಗಿದೆ. ಈಗ ರಾಜ್ಯದಲ್ಲಿ 161 ತನಿಖಾ ಠಾಣೆಗಳನ್ನು ಸ್ಥಾಪಿಸಲಾಗಿದೆ. ಅಲ್ಲದೆ 231 ನಿಯಂತ್ರಿತ ನಿಸ್ತಂತು ಉಪಕರಣಗಳು ಮತ್ತು 207 ವಾಕಿ-ಟಾಕಿ ಉಪಕರಣಗಳನ್ನು ಒದಗಿಸಲಾಗಿದೆ.

ಅರಣ್ಯ ಸಂಚಾರಿ ದಳವಲ್ಲದೇ ಪೋಲೀಸ್ ಇಲಾಖೆಯ ಡಿ.ಐ.ಜಿ.ಯವರ ನೇತೃತ್ವದಲ್ಲಿ ಪೋಲೀಸ್ ಪಡೆಯು ಅರಣ್ಯ ದಳವೂ ಸಹ ಈ ಕಾರ್ಯದಲ್ಲಿ ಕಾರ್ಯೋನ್ಮುಖವಾಗಿದೆ.

ಕಳ್ಳ ಸಾಗಾಣಿಕೆಯ ಬಗ್ಗೆ ಸುಳಿವು ಕೊಡುವವರಿಗೆ ಗುಪ್ತ ಸೇವಾ ನಿಧಿಯಿಂದ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ. ಕಳ್ಳ ಸಾಗಾಣಿಕೆಯ ಪ್ರಕರಣಗಳನ್ನು ಪತ್ತೆ ಮಾಡಿದ ಸಿಬ್ಬಂದಿಯವರಿಗೆ ಪ್ರೋತ್ಸಾಹ ಧನವನ್ನು ನೀಡುವುದಲ್ಲದೆ ಈ ಬಗ್ಗೆ ಧೈರ್ಯ ಸಾಹಸವನ್ನು ತೋರಿದವರಿಗೆ ಪಾರಿತೋಷಕವನ್ನು ನೀಡಲಾಗುತ್ತದೆ. ಮಾಲಿನ ಸಹಿತ ಕಳ್ಳ ಸಾಗಾಣಿಕೆದಾರರನ್ನು ಬಂಧಿಸಿದವರಿಗೆ ಮಾಲಿನ ಮೌಲ್ಯದ ಶೇಕಡ 15 ರಷ್ಟು ಅಂದರೆ 10,000-00 ರೂಪಾಯಿಗೆ ಮೀರದಂತೆ ಬಹುಮಾನ ನೀಡಲಾಗುತ್ತದೆ.

ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ ವಾಹನಗಳನ್ನು ಮಾಲಿನ ಸಹಿತ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಅರಣ್ಯ ಕಾಯಿದೆಯನ್ವಯ ಉಪ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಅಧಿಕಾರವಿರುತ್ತದೆ.

8ನೇ ಪಂಚವಾರ್ಷಿಕ ಯೋಜನೆಯಲ್ಲಿ ಅರಣ್ಯ ಕಳ್ಳ ಸಾಗಾಣಿಕೆಯನ್ನು ತಡೆಯಲು ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದು ಈಗಾಗಲೇ ಭಾರತ ಸರ್ಕಾರಕ್ಕೆ ಸುಮಾರು 500 ಲಕ್ಷ ರೂಪಾಯಿಗಳ ಯೋಜನೆಯನ್ನು ಕಳುಹಿಸಿಕೊಡಲಾಗಿದೆ. ಅರಣ್ಯ ನೀತಿಯಲ್ಲಿ ಸಹ ಅರಣ್ಯ ನಾಶ ತಡೆಯಲು ಮುಖ್ಯವಾಗಿ ರೂಪುರೇಷೆಗಳನ್ನು ಅಳವಡಿಸಿದೆ.

ಮುಖ್ಯವಾಗಿ ಕರ್ನಾಟಕ ರಾಜ್ಯದಲ್ಲಿ ಶ್ರೀ ಗಂಧದ ಕಳ್ಳ ಸಾಗಾಣಿಕೆಯನ್ನು ಸಂಪೂರ್ಣವಾಗಿ ತಡೆಗಟ್ಟಬೇಕಾದರೆ ಪಕ್ಕದ ರಾಜ್ಯವಾದ ಕೇರಳದಲ್ಲಿ ಸಹ ಕರ್ನಾಟಕ ರಾಜ್ಯದಷ್ಟೆ ಬಿಗಿಯಾಗಿ ತಕ್ಕ ಕಾಯಿದೆ ವ್ಯವಸ್ಥೆಯಾಗಬೇಕು. ಇದಕ್ಕಾಗಿ ಒಂದು ಸಮಗ್ರ ಕಾಯಿದೆಯನ್ನು ರೂಪಿಸಿ ದಕ್ಷಿಣ ಭಾರತದ ಎಲ್ಲ ರಾಜ್ಯಗಳಿಗೂ ಅನ್ವಯಿಸುವಂತೆ ಭಾರತ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ.

2. ಕಳ್ಳ ಸಾಗಾಣಿಕೆದಾರರನ್ನು ಬಂದಿಸಿಲ್ಲವೆಂಬುದು ಸರಿಯಲ್ಲ ಅನೇಕ ಪ್ರಕರಣಗಳಲ್ಲಿ ಕಳ್ಳ ಸಾಗಾಣಿಕೆದಾರರನ್ನು ಬಂಧಿಸಿ ಪೋಲೀಸರ ವಶಕ್ಕೆ ಕೊಡಲಾಗಿದೆ. ಕಳ್ಳ ಸಾಗಾಣಿಕೆ ಮಾಲನ್ನು ಮತ್ತು ಕಳ್ಳ ಸಾಗಾಣಿಕೆದಾರರನ್ನು ಹಿಡಿಯುವಾಗ ಕೆಲವು ಸಲ ಕಳ್ಳ ಸಾಗಾಣಿಕೆದಾರರು ವಾಹನಗಳನ್ನು ಮತ್ತು ಮಾಲನ್ನು ಬಿಟ್ಟು ಓಡಿ ಹೋಗುತ್ತಾರೆ. ಅಂತಹವರ ಮೇಲೆ ತಪ್ಪಿಸಿಕೊಂಡು ಹೋಗದಂತೆ ತಡೆಯಲು ಗುಂಡಿನ ಕಾಳಗವು ಸಹ ಅನೇಕ ಬಾರಿ ನಡೆದಿರುತ್ತದೆ.

3. ಕಳ್ಳ ಸಾಗಾಣಿಕೆದಾರ ಶ್ರೀ ವೀರಪ್ಪನ್‌ನ್ನು ಬಂಧಿಸಲು ಒಂದು ವಿಶೇಷ ದಳವನ್ನು ನೇಮಿಸಿ ಈ ದಳವು ಈಗಾಗಲೇ ಕಾರ್ಯೋನ್ಮುಖವಾಗಿದ್ದು, ಇವನ ತಂಡವು ಕೆಲವು ಪ್ರಮುಖ ಸದಸ್ಯರನ್ನು ಈಗಾಗಲೇ ಬಂಧಿಸಿದ್ದಾರೆ. ಈ ಬಗ್ಗೆ ಕರ್ನಾಟಕ ಮತ್ತು ತಮಿಳುನಾಡಿನ ಅರಣ್ಯ ಇಲಾಖೆಯು ಮತ್ತು ಪೋಲೀಸ್ ಇಲಾಖೆಯ ವರಿಷ್ಠ ಅಧಿಕಾರಿಗಳು ಸಭೆ ಸೇರಿ ಈ ಬಗ್ಗೆ ಚರ್ಚಿಸಿದ್ದಾರೆ. ಶ್ರೀ ವೀರಪ್ಪನ್‌ನ್ನು ಸೆರೆ ಹಿಡಿಯಲು ಕಾರ್ಯ ಚಟುವಟಿಕೆಯನ್ನು ತೀವ್ರಗೊಳಿಸಿ ಅವರಿಗೆ ಅನುಕೂಲವಾಗುವಂತೆ ಬಂದೂಕು, ಜೀಪು, ವೈರ್‌ಲೆಸ್ ಉಪಕರಣಗಳನ್ನು ಒದಗಿಸಲಾಗಿದೆ.

4. ವೀರಪ್ಪನ್‌ನ್ನು ಹಿಡಿಯುವುದಕ್ಕಾಗಿ ಅರಣ್ಯ ಇಲಾಖೆ ವತಿಯಿಂದ ಈವರೆಗೆ ರೂಪಾಯಿ 26,27,774-00 ವೆಚ್ಚವಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ 1985-86ರ ಹಾಗೂ 87ರ ವಿಶೇಷ ಘಟಕ ಯೋಜನೆಯಲ್ಲಿ ಆದ ಮನೆಗಳು

75 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ 1985-86ರ ಹಾಗೂ 87ರಲ್ಲಿ ಎನ್.ಪಿ. ಸ್ಕೀಮ್‌ನಲ್ಲಿ ಹರಿಜನ ಗಿರಿಜನರಿಗೆ ಮಂಜೂರಾದ ಮನೆಗಳೆಷ್ಟು?